ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 4, Jan-Feb, 2023, Pp. 5-10.
©*IIMRD*, Mysuru

IIMRD JOURNALS

www.iimrd.com

# ಸಾಂಸ್ಕೃತಿಕವಾಗಿ ಒಡ್ಡಗಲ್ಲು ರಂಗನಾಥಸ್ವಾಮಿ ಜಾತ್ರೆ–ಒಂದು ವಿಶ್ಲೇಷಣೆ

**ಡಾ.ನೀಲಕಂಠಸ್ವಾಮಿ***

*ಸಹ ಪ್ರಾಧ್ಯಾಪಕರು ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು

***ಸಾರಾಂಶ:(Abstract)***

*ಒಡ್ಗಲ್ ರಂಗನಾಥಸ್ವಾಮಿ ಬೆಟ್ಟವು ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನಲ್ಲಿದೆ.ಇದು ಬನ್ನೂರು ಹೋಬಳಿಯ ಬಿ.ಬೆಟ್ಟಹಳ್ಳಿ ಗ್ರಾಮದ ಸಮೀಪದಲ್ಲಿ ನಾಲ್ಕು ಕಿಲೋ ಮೀಟರ್ ದೂರದ ಒಂದು ಬೆಟ್ಟದ ತುದಿಯಲ್ಲಿದೆ.ದೇವಾಲಯಗಳು ಬೆಟ್ಟದ ತುಟ್ಟತುದಿಯಲ್ಲಿ ಕಾಡಿನ ಮಧ್ಯದಲ್ಲಿ ಕೆಲವು ಕಡೆ ಸುತ್ತಲೂ ನೀರಿದ್ದು ಅದರ ಮಧ್ಯದಲ್ಲಿ ರಂಗನಾಥಸ್ವಾಮಿ ದೇವಾಲಯ ಕಂಡು ಬರುತ್ತದೆ.*

***ಮುಖ್ಯಪದಗಳು (Keywords)*** *ಜಾತ್ರೆ, ಹಬ್ಬ, ಸಂಸ್ಕೃತಿ, ರಂಗನಾಥ ಸ್ವಾಮಿ, ಒಡ್ಡಗಲ್ಲು.*

## ಪೀಠಿಕೆ

ದೇವರ ಉಗಮವನ್ನು ಕುರಿತಂತೆ ಒಂದು ಸುಂದರವಾದ ಪುರಾಣದ ಹಿನ್ನೆಲೆಯು ತಿಳಿದುಬರುತ್ತದೆ. ಕಲಿಯುಗದ ಆರಂಭದಲ್ಲಿ ವೆಂಕಟೇಶ್ವರ ಮತ್ತು ರಂಗನಾಥ ಇಬ್ಬರೂ ಜೊತೆಯಾಗಿ ಪ್ರಪಂಚದಲ್ಲಿ ಯಾವ ಸ್ಥಳವು ಪವಿತ್ರವಾಗಿದೆ? ಎಲ್ಲಿ ಪುಣ್ಯಕ್ಷೇತ್ರವಿದೆ? ಅಂತಹ ಕ್ಷೇತ್ರಗಳಲ್ಲಿ ನೆಲೆಸಿ ಸಾಮಾನ್ಯ ಮಾನವರಿಗೆ ತಮ್ಮ ಮೇಲೆ ಅಪಾರವಾದ ನಂಬಿಕೆ, ಅನನ್ಯವಾದ ಭಕ್ತಿಯು ಒಡಮೂಡುವಂತೆ ಮಾಡಬೇಕು. ಇದಕ್ಕಾಗಿ ಪವಿತ್ರವಾದ ಕ್ಷೇತ್ರವನ್ನು ಹುಡುಕಿ ತಮ್ಮ ನಿವಾಸ ಸ್ಥಾನವನ್ನಾಗಿ ಮಾಡಿಕೊಂಡು ಮುಗ್ಧ ಮಾನವ ಕೋಟಿಯು ಉದ್ದಾರವಾಗುವಂತೆ ಉಪದೇಶ ಮಾಡಲು ಇಬ್ಬರೂ ಪ್ರಪಂಚ ಪರ್ಯಟನೆಗೆ ಹೊರಟವರಿಗೆ ಪುಣ್ಯ ಕ್ಷೇತ್ರವು ನೆಲೆಸಲು ಸಿಗದೆ ಕೊನೆಗೆ ಈ ಬೆಟ್ಟದ ಘೋರಾರಣ್ಯಕ್ಕೆ ಬಂದರು. ಅಷ್ಟರಲ್ಲಿ ಪ್ರಪಂಚದ ಎಲ್ಲಾ ಭಾಗಗಳನ್ನು ಸುತ್ತಿ ಸುತ್ತಿ ಇಬ್ಬರೂ ತುಂಬಾ ಆಯಾಸಗೊಂಡಿದ್ದರು. ನಂತರ ವಿಶ್ರಾಂತಿ ತೆಗೆದುಕೊಳ್ಳಲು ಈ ಅರಣ್ಯದಲ್ಲಿ ತಂಪಾಗಿರುವ ಸ್ಥಳವನ್ನು ಹುಡುಕುವಾಗ ಅಲ್ಲೊಂದು ಕಲ್ಲು ಬಂಡೆಯು ಕಾಣಿಸಿತು. ಈ ಬಂಡೆಯು ಒಂದು ಸೋಪಾನದಂತೆ ಇತ್ತು. ಕಲ್ಲಿನ ಸುತ್ತಲೂ ಮೂರು ದೊಡ್ಡ ದೊಡ್ಡ ಬಂಡೆಗಳು ಆವರಿಸಿದವು. ಒಂದೊಂದು ಬಂಡೆಗಳು ಸಹ ಸುಮಾರು ಎರಡು ಆನೆಗಳಷ್ಟು ದಪ್ಪವಿದ್ದು ಬಂಡೆಗಳ ನೆರಳು ಕಲ್ಲಿನ ಮೇಲೆ ಬಿದ್ದು ತಂಪಾಗಿರುವಂತೆ ಮಾಡಿದ್ದವು. ಆದ್ದರಿಂದ ವೆಂಕಟೇಶ್ವರ ಮತ್ತು ರಂಗನಾಥ ಈ ಸ್ಥಳವು ವಿಶ್ರಮಿಸಲು ಸರಿಯಾದ ಸ್ಥಳವೆಂದು ನಿರ್ಧರಿಸಿ ಸ್ವಲ್ಪ ಹೊತ್ತು ಕುಳಿತುಕೊಂಡು ನಂತರ ಕಲ್ಲಿನ ಮೇಲೆ ಇಬ್ಬರೂ ಮಲಗಿದರು. ತಕ್ಷಣವೇ ಅವರಿಗೆ ತಿಳಿಯದಂತೆ ನಿದ್ರಾದೇವಿಗೆ ಮೊರೆ ಹೋದರು.

*Please cite this article as: ಡಾ. ನೀಲಕಂಠಸ್ವಾಮಿ.* (2023). ಸಾಂಸ್ಕೃತಿಕವಾಗಿ ಒಡ್ಡಗಲ್ಲು ರಂಗನಾಥಸ್ವಾಮಿ ಜಾತ್ರೆ–ಒಂದು ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(4). ಪು.ಸಂ. 5–10.*

**ಒಡ್ಗಲ್ ರಂಗನಾಥಸ್ವಾಮಿಯ ದೇವಾಲಯ**

ಒಡ್ಗಲ್ ರಂಗನಾಥಸ್ವಾಮಿಯ ದೇವಾಲಯಕ್ಕೆ ಒಡ್ಡಗಲ್ಲು ಅಥವಾ ಒಡ್ಗಲ್ ಎಂದು ಹೆಸರು ಬರಲು ಕಾರಣವೇನೆಂದರೆ ರಂಗನಾಥ ದೇವಾಲಯದ ವಿಗ್ರಹವು ಒಡ್ಡೊಡ್ಡಾಗಿರುವುದೇ ಆಗಿದೆ. ಅಂದರೆ ದೇವರ ವಿಗ್ರಹ ಮೂರ್ತಿಯು ಯಾವುದೇ ಆಕಾರವಿಲ್ಲದೆ ಒರಟಾದ ಕಲ್ಲಿನ ವಿಗ್ರಹವಾಗಿದೆ. ಆದ್ದರಿಂದ ಈ ದೇವರನ್ನು ಒಡ್ಡಗಲ್ಲು ರಂಗನಾಥಸ್ವಾಮಿ ಎಂದು ಕರೆಯುತ್ತಾರೆ. ಇದು ದೇವರ ವಿಗ್ರಹ ಸ್ವರೂಪದ ಹಿನ್ನೆಲೆಯಲ್ಲಿ ಬಂದ ನಿಷ್ಪತ್ತಿಯಾಗಿದೆ. ಹಾಗೆಯೇ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಈ ದೇವಾಲಯವು ಬಂಡೆಗಲ್ಲುಗಳಿಂದ ಸುತ್ತಲೂ ಒಡ್ಡಿಕೊಂಡಿರುವುದರಿಂದ ಒಡ್ಡಿದಕಲ್ಲು, ಒಡ್ಡಗಲ್ಲು, ಒಡ್ಗಲ್ ಆಗಿರಬಹುದು. ಒಡ್ಗಲ್ ರಂಗನಾಥಸ್ವಾಮಿಯ ದೇವಾಲಯವನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ಇವರು ಹೇಳುವ ಕಥೆಗೆ ಹತ್ತಿರವಾಗುವಂತೆಯೇ ದೇವಾಲಯದ ಸ್ವರೂಪವಿದೆ. ಆದರೆ ಕಥೆಯು ದೇವರ ಉಗಮದ ನಂತರ ಹುಟ್ಟಿರಬಹುದೇನೋ ಎನಿಸುತ್ತದೆ. ಅಂದರೆ ಜನರು ಈ ಕ್ಷೇತ್ರವನ್ನು ಪುಣ್ಯಕ್ಷೇತ್ರ ಅಥವಾ ದೇವರ ಉಗಮಸ್ಥಾನವೆಂದು ಮನಸ್ಸಿನಲ್ಲಿ ಸ್ವೀಕರಿಸಿದ ಮೇಲೆ ಇಂತಹ ಕಥೆಗಳು ಹುಟ್ಟಿವೆಯೇನೋ ಎನಿಸುತ್ತದೆ.

ಅನಂತರ ಅವರಿಬ್ಬರು ಎಚ್ಚರಗೊಂಡು ಕಣ್ಣು ತೆರೆದು ನೋಡಿದಾಗ ಮುಂಜಾನೆಯ ಸೂರ್ಯನನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ತಾವು ಮಲಗಿದ್ದೇ ಗೊತ್ತಾಗಲಿಲ್ಲವೆಂದು ಅವರಲ್ಲಿಯೇ ಮಾತನಾಡಿಕೊಂಡು ಪ್ರತಿದಿನದಂತೆ ಮುಂದಿನ ದಾರಿಯನ್ನು ಹಿಡಿದುಕೊಂಡು ಹೊರಟರು. ಕಾವೇರಿ ನದಿಯ ದಡದಲ್ಲಿರುವ ಕಂಬದರಾಯನ ಬೆಟ್ಟದ ತಪ್ಪಲಿನಲ್ಲಿ ಇಬ್ಬರು ಸ್ನಾನಮಾಡಿ ಅನಂತರ ವೆಂಕಟೇಶ್ವರನು ಸೋದರನಾದ ರಂಗನಾಥನನ್ನು "ಎಲ್ಲಿ ನಾಮವಿಟ್ಟುಕೊಳ್ಳೋಣ ನಾಮ ಕುಂಕುಮವಿರುವ ತಿರುಮಣಿ ಪೆಟ್ಟಿಗೆಯನ್ನು ಕೊಡು" ಎಂದು ಕೇಳಿದನು. ರಂಗನಾಥನು ಅದನ್ನು ಇಟ್ಟಿದ್ದ ಕೈಚೀಲದೊಳಗೆಲ್ಲಾ ಹುಡುಕಿದನು. ಅದು ಸಿಗಲಿಲ್ಲ "ಅಣ್ಣ ತಿರುಮಣಿ ಪೆಟ್ಟಿಗೆ ಎಲ್ಲೂ ಇಲ್ಲ, ಎಲ್ಲೋ ಕಳೆದು ಹೋಗಿದೆ" ಎಂದನು. ಅದಕ್ಕೆ ವೆಂಕಟೇಶ್ವರನು "ಬಹುಶಃ ನಾವು ಮಲಗಿದ್ದ ಸ್ಥಳದಲ್ಲಿ ಬಿಟ್ಟು ಬಂದಿರಬಹುದು. ನೀನು ಅಲ್ಲಿಗೆ ಹೋಗಿ ಅದನ್ನು ತೆಗೆದುಕೊಂಡು ಬರುವೆಯಾ ಅದಿಲ್ಲದೆ ನಮಗೆ ನಾಮವಿಟ್ಟುಕೊಳ್ಳುವುದಕ್ಕೆ ತೊಂದರೆಯಾಗಬಹುದು" ಎಂದು ಹೇಳಿದನು. ಅದಕ್ಕೆ ತಪ್ಪು ಮಾಡಿದವನಂತೆ ರಂಗನಾಥನು ತನ್ನ ಎರಡು ಕೈಗಳನ್ನು ಕಟ್ಟಿಕೊಂಡು ಆಗಬಹುದು ಎಂದು ಹೇಳಿ, ಅಲ್ಲಿಂದ ತಾವು ತಂಗಿದ್ದ ಸ್ಥಳಕ್ಕೆ ಓಡೋಡಿ ಬಂದನು. ತಿರುಮಣಿ ಪೆಟ್ಟಿಗೆಯು ಅವರು ಕುಳಿತಿದ್ದ ಸೋಪಾನದಂತಿದ್ದ ಕಲ್ಲಿನ ಮೇಲೆ ಇದ್ದುದ್ದನ್ನು ಕಂಡು ಅವನಿಗೆ ತುಂಬಾ ಸಂತೋಷವಾಯಿತು. ಕೂಡಲೇ ನಾಮದ ಪೆಟ್ಟಿಗೆಯ ಸಮೀಪಕ್ಕೆ ಧಾವಿಸಿ ಪೆಟ್ಟಿಗೆಯನ್ನು ಎತ್ತಿಕೊಳ್ಳಲು ಕೈ ಹಾಕಿದನು. ಕೈಗೆ ಪೆಟ್ಟಿಗೆ ಬರಲಿಲ್ಲ. ಬಹುಶಃ ಬೆಳಗಿನ ಇಬ್ಬನಿ ಬಿದ್ದು ನೀರು ಸೇರಿ ಬಂಡೆಗೆ ಅಂಟಿರಬಹುದು ಎಂದು ತಿಳಿದು ಮತ್ತೆ ಸ್ವಲ್ಪ ಬಲವನ್ನು ಬಿಟ್ಟು ಎತ್ತಿದನು. ಆದರೂ ನಾಮದ ಪೆಟ್ಟಿಗೆಯು ಬರಲಿಲ್ಲ. ಆಶ್ಚರ್ಯವಾಗಿ ಗಾಬರಿಗೊಂಡು ಈ ವಿಷಯ ಅಣ್ಣನವರಿಗೆ ಹೇಳಿದರೆ ಎಲ್ಲಿ ಸಿಟ್ಟಾಗುವರೋ ಎಂದು ಭಯಪಟ್ಟನು. ಅದರೂ ಅವನು ನಿರಾಶೆಗೊಳ್ಳದೆ ಇದೊಂದು ಭಾರಿ ಕೊನೆಯದಾಗಿ ಎತ್ತಲು ಪ್ರಯತ್ನಿಸುತ್ತೇನೆಂದು ನಿರ್ಧರಿಸಿ ತನ್ನೆಲ್ಲಾ ಬಲವನ್ನು ಬಿಟ್ಟು ತನ್ನ ಅಣ್ಣನಾದ ವೆಂಕಟೇಶ್ವರನನ್ನು ನೆನೆಯುತ್ತಾ ಪೆಟ್ಟಿಗೆಯನ್ನು ಎತ್ತಿದನು. ಆಗಲೂ ನಾಮದ ಪೆಟ್ಟಿಗೆಯು ಸ್ವಲ್ಪವೂ ಅಲುಗಲಿಲ್ಲ. ಇದನ್ನು ಕಂಡು

ರಂಗನಾಥನಿಗೆ ಎಲ್ಲಿಲ್ಲದ ದುಃಖವುಂಟಾಯಿತು. ಏಕೆಂದರೆ "ದೈವ ಸಂಭೂತನಾದ ನನ್ನಂಥವನು ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿದರೂ ಎಲ್ಲಾ ವಿಫಲವಾಯಿತಲ್ಲ ಇಷ್ಟಕ್ಕೂ ಪೆಟ್ಟಿಗೆಗೆ ಇಷ್ಟು ಶಕ್ತಿ ಬಂದಿದ್ದು ಒಂದು ಪವಾಡವೇ ಸರಿ ಇನ್ನೂ ಕಾಲ ವಿಳಂಬ ಮಾಡಿದರೆ ಪ್ರಯೋಜನವಿಲ್ಲ ಇಲ್ಲಿ ನಡೆದ ಅದ್ಭುತ ಘಟನೆಯನ್ನು ಅಣ್ಣನವರಿಗೆ ವಿವರಿಸಿದರೆ ಅವರೆ ಇದಕ್ಕೆ ತಕ್ಕಂತಹ ಪರಿಹಾರವನ್ನು ಹುಡುಕುವರು ಎಂದು ನಿಶ್ಚಯಿಸಿ ರಂಗನಾಥನು ಅಣ್ಣನವರ ಬಳಿಗೆ ಬಂದನು.

ವೆಂಕಟೇಶ್ವರನು ಸೋದರನಾದ ರಂಗನಾಥನು ಓಡೋಡಿ ಬರುವುದನ್ನು ನೋಡಿ ಗಾಬರಿಗೊಂಡು ಬಂದ ಕೂಡಲೇ ಶಾಂತವಾಗಿ ವಿಚಾರಿಸಲು ಅವನು ನಡೆದ ವಿಚಾರವನ್ನು ತಿಳಿಸಿದನು. ಆಗ ವೆಂಕಟೇಶ್ವರನು ನಾಮದ ಪೆಟ್ಟಿಗೆಯ ಕಡೆಗೆ ತನ್ನ ದಿವ್ಯದೃಷ್ಟಿಯನ್ನು ಹಾಯಿಸಿದನು. ಕ್ಷಣಕಾಲದ ನಂತರ ಇದ್ದಕ್ಕಿದ್ದ ಹಾಗೇ ಅವರ ಮುಖದಲ್ಲಿ ಸಂತೋಷದ ಹೊನಲು ಲಾಸ್ಯವಾಡಿತು. ಹಸನ್ಮುಖನಾಗಿ ರಂಗನಾಥನನ್ನು ಉದ್ದೇಶಿಸಿ "ರಂಗನಾಥ ನಾವು ನಿನ್ನೆ ವಿಶ್ರಮಿಸಿಕೊಂಡಿದ್ದ ಸ್ಥಳವು ತುಂಬಾ ಶ್ರೇಷ್ಠವಾದದ್ದು ಮುಂದೆ ಮಾನವ ಕೋಟಿಗೆ ಶ್ರೇಯಸ್ಸಾಗುವಂತಹ ಸ್ಥಳವೆಂದು ತಿಳಿದುಬರುತ್ತದೆ. ಇದು ಪುಣ್ಯ ಕ್ಷೇತ್ರವೆಂಬುದರಲ್ಲಿ ಸಂಶಯವಿಲ್ಲ. ನೀನು ಪುನಃ ಅಲ್ಲಿಗೆ ಹೋಗು ಆ ನಾಮದ ಪೆಟ್ಟಿಗೆಗೆ ಒಡ್ಡಗಲ್ಲು ಎಂದು ಹೆಸರಿಟ್ಟಿದ್ದೇನೆ. ಏಕೆಂದರೆ ಮೂರು ಹೆಬ್ಬಂಡೆಗಳು ತಮ್ಮ ನೆರಳನ್ನು ಒಡ್ಡಿರುವುದರಿಂದ ಅದನ್ನು ಒಡ್ಡಗಲ್ಲು ಎಂತಲೂ ಮೊದಲು ನೀನು ನಾಮಕರಣ ಮಾಡು, ಇಂದಿಗೆ ಹುಡುಕಾಟದ ಫಲ ಪಲಿಸಿತು" ಎಂದು ಹೇಳಿದ ನಂತರ ನಿನ್ನನ್ನು ಪೂಜಿಸಲಿ ಒಡ್ಡಗಲ್ಲು ರಂಗನಾಥ ಎಂದು ನೀನು ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾಗಿ ನಿನ್ನ ಭಕ್ತರನ್ನು ಕಾಪಾಡಿಕೊಂಡು ಅತಿ ವೈಭವದಿಂದ ಕಲಿಯುಗವು ಪೂರ್ಣವಾಗುವವರೆಗೂ ಇಲ್ಲಿಯೇ ಶಾಶ್ವತವಾಗಿ ನೆಲೆಸು. ಈ ಕ್ಷೇತ್ರವು "ಶ್ರೀ ಒಡ್ಡಗಲ್ಲು ರಂಗನಾಥಸ್ವಾಮಿಯ ಪುಣ್ಯಕ್ಷೇತ್ರವೆಂದು ಪ್ರಸಿದ್ಧಿಯಾಗಲಿ" ಹೇಳಿದನಂತೆ.

ರಂಗನಾಥನು ಅಣ್ಣನ ಮಾತುಗಳನ್ನು ವೇದವಾಕ್ಯವೆಂದು ಭಾವಿಸಿ ಈ ಆದೇಶವನ್ನು ಶಿರಸಾವಹಿಸಿ ನೆರವೇರಿಸುತ್ತೇನೆ ಎಂದ ಮೇಲೆ ವೆಂಕಟೇಶ್ವರನು ಇನ್ನೂ ನಾನು ನೆಲೆಸುವ ಸ್ಥಳವು ಇನ್ನೆಲ್ಲಿರುವುದೋ? ಅದನ್ನು ಹುಡುಕಿಕೊಂಡು ದಕ್ಷಿಣಾಭಿಮುಖವಾಗಿ ಹೊರಡುತ್ತೇನೆ. ನನ್ನ ನಿವಾಸ ಸ್ಥಾನ ಸಿಕ್ಕಿದ ಕೂಡಲೇ ನಿನಗೆ ತಿಳಿಸಿ ಅನಂತರ ನನ್ನ ನಿಜ ಸ್ಥಾನವಾದ ತಿರುಮಲೆಗೆ ತೆರಳುತ್ತೇನೆ. ಈಗ ಸ್ನಾನವಂತೂ ಆಯಿತು. ಬಾ ಕಾವೇರಿ ನದಿಗೆ ಪೂಜೆ ಮಾಡಿ ನಂತರ ನನ್ನ ಪ್ರಯಾಣವನ್ನು ಮುಂದುವರೆಸುತ್ತೇನೆ. ಆದರೆ ನಾಮವಿಟ್ಟುಕೊಳ್ಳುವುದಕ್ಕೆ ಏನು ಮಾಡುವುದು? ಎನ್ನುತ್ತಿದ್ದಂತೆಯೇ ರಂಗನಾಥನು ಅಲ್ಲಿಯೇ ಇದ್ದ ಕಬಂದರಾಯನ ಬೆಟ್ಟದ ಒಂದು ಬಿಳಿ ಕಲ್ಲನ್ನು ತೇಯ್ದು ಬಿಳಿಯ ನಾಮವನ್ನಾಗಿ ಮಾಡಿ ಇಬ್ಬರೂ ನಾಮವನ್ನಿಟ್ಟುಕೊಂಡು ಹರಿಯುತ್ತಿದ್ದ ಕಾವೇರಿ ನದಿಗೆ ನಮಸ್ಕಾರ ಮಾಡಿ "ರಂಗನಾಥ ನಾನಿನ್ನು ಹೊರಡುತ್ತೇನೆ" ಎಂದು ಹೇಳಿ ಹೊರಟು ಹೋದನು. ನಂತರ ವೆಂಕಟೇಶ್ವರನು ದಕ್ಷಿಣಾಭಿಮುಖವಾಗಿ ಹೊರಟು 'ಹುಲುಗನ ಮುರಡಿ ವೆಂಕಟರಮಣ' ಈ ಸ್ಥಳವು ಗುಂಡ್ಲುಪೇಟೆ ತಾಲ್ಲೂಕು, ತೆರಕಣಾಂಬಿ ಎಂಬ ಗ್ರಾಮದಿಂದ 10ಕಿ.ಮೀ. ದೂರದಲ್ಲಿದೆ. ಆ ಬೆಟ್ಟದಲ್ಲಿ ನೆಲೆಸಿ ರಂಗನಾಥನ ಬಳಿ ಬಂದು ವಿಷಯ ತಿಳಿಸಿದನಂತೆ. ಅನಂತರ ಹೊರಟು ನಿಂತಾಗ ರಂಗನಾಥನು ಅಣ್ಣ ನಾವು ಇದುವರೆವಿಗೂ ಜೊತೆಯಲ್ಲಿಯೇ ಇದ್ದೆವು. ಆದರೆ ಈಗ ನಿಮ್ಮ ಅಪ್ಪಣೆಯನ್ನು ಮೀರುವ ಶಕ್ತಿ ನನಗಿಲ್ಲ. ಹೀಗಿರುವಲ್ಲಿ ನಾನು ನಿಮ್ಮನ್ನು

ಕಾಣುವ ದಾರಿಯೇ ಇಲ್ಲವೇ? ಎಂದು ಕೇಳಿಕೊಂಡಾಗ ವೆಂಕಟೇಶ್ವರ ಒಂದು ಸಲಹೆಯನ್ನು ನೀಡಿದನಂತೆ ಕೇಳು "ನೀನು ಪ್ರತಿ ಶನಿವಾರವೂ ಮಧ್ಯಾಹ್ನ ಸೂರ್ಯನು ಪಶ್ಚಿಮ ದಿಕ್ಕಿಗೆ ವಾಲಿದ ಸ್ವಲ್ಪ ಸಮಯಕ್ಕೆ ಇಲ್ಲಿಂದ ಪಾಂಚಜನ್ಯ ಶಂಖನಾದವನ್ನು ಮೊಳಗಿಸಿದರೆ ನಾನು ಆ ನಾದವನ್ನು ಕೇಳಿದೊಡನೆಯೇ ಓಡೋಡಿ ಬಂದು ನಿನಗೆ ದರ್ಶನವನ್ನು ಕೊಟ್ಟು ನಿನ್ನ ಯೋಗಕ್ಷೇಮವನ್ನು ವಿಚಾರಿಸಿ ಅನಂತರ ಹೋಗುತ್ತೇನೆಂದು" ಹೇಳಿದನು. ನಂತರ ಸಂತೋಷದಿಂದ ಬೀಳ್ಕೊಡುವಂತೆ ಕೇಳಿಕೊಂಡ ಮೇಲೆ ರಂಗನಾಥನು ಅವನಿಗೆ ದೀರ್ಘದಂಡ ನಮಸ್ಕಾರವನ್ನು ಮಾಡಿದ ಕೂಡಲೇ ವೆಂಕಟೇಶ್ವರ ಅದೃಶ್ಯನಾದನಂತೆ ಈ ಕಥೆಯನ್ನು ಇಲ್ಲಿನ ಭಕ್ತಾದಿಗಳು ಹೇಳುತ್ತಾರೆ ಮತ್ತು ನಂಬುತ್ತಾರೆ.

ಈ ರೀತಿಯಾಗಿ ಜನರು ದೇವರ ಸೃಷ್ಟಿಯ ಹಿಂದೆ ಕಲ್ಪಿತ ಕಥೆಗಳನ್ನು ಕಟ್ಟುಕೊಂಡಿದ್ದಾರೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಾನಸಿಕ ಪ್ರಜ್ಞೆ ಕೆಲಸ ಮಾಡಿರುವುದು ಗೋಚರವಾಗುತ್ತದೆ. ಮನುಷ್ಯನ ಮನಸ್ಸು ಕಷ್ಟಗಳನ್ನು ಕೇಳುವಲ್ಲಿ ನಿರಾಸಕ್ತಿಯನ್ನು ತೋರಿಸಿದಾಗ ತನ್ನ ಕಷ್ಟಗಳನ್ನು ಯಾರ ಬಳಿಯಾದರೂ ಹೇಳಿಕೊಳ್ಳಬೇಕೆಂಬ ಅಭೀಷ್ಠೆಯಿಂದ ಇಂತಹ ಕಲ್ಲುಗಳಲ್ಲಿ ಕಾಣದ ಶಕ್ತಿಯನ್ನು ಮತ್ತು ದೇವರ ರೂಪವನ್ನು ಕಟ್ಟಿಕೊಂಡು ತನ್ನ ಕಷ್ಟಗಳನ್ನು ಹೇಳಿಕೊಳ್ಳತೊಡಗಿದ ಮತ್ತು ತನ್ನ ಕಷ್ಟವನ್ನು ಪರಿಹಾರ ಮಾಡುವ ಶಕ್ತಿಯನ್ನು ಅವುಗಳಿಗಿದೆ ಎಂದು ನಂಬಿದ; ಬಾಹ್ಯ ಸ್ವರೂಪಕ್ಕನುಗುಣವಾಗಿ ಕಲ್ಪಿತ ಕಥೆಗಳನ್ನು ಕಟ್ಟಿಕೊಂಡು ಮಾನವರಲ್ಲಿ ನಂಬಿಕೆಯ ಬೀಜಬಿತ್ತಿದ. ಹಿಂದೆ ತಿಳಿಸಿದಂತೆ ಸ್ವರೂಪಕ್ಕನುಗುಣವಾಗಿ ಹೆಸರುಗಳನ್ನು ನೀಡಿದ.ದೇವಾಲಯದ ಅಭಿವೃದ್ಧಿಯಲ್ಲಿ ಗಮನಹರಿಸಿದ. ಹೀಗೆ ತನಗೆ ಗೊತ್ತಿಲ್ಲದಂತೆ ತಾನೇ ಸೃಷ್ಟಿಸಿದ ದೇವರಲ್ಲಿ ವಿಶಿಷ್ಟ ಶಕ್ತಿಯ ರೂಪವನ್ನು ಕಂಡು ಆಚರಿಸುತ್ತಾ ಮುಂದುವರಿದ. ಈ ರೀತಿಯ ಕಥೆಗಳನ್ನು ಕೇಳಿದ ಮುಂದಿನ ಪೀಳಿಗೆಯು ಭಕ್ತಿಭಾವದಿಂದ ಆಚರಿಸುತ್ತಾ ಬಂದಿತು. ಹೀಗೆ ಏನೇ ಕಥೆಗಳಿದ್ದರೂ ಒಂದು ಮಾನಸಿಕ ಪ್ರಜ್ಞೆ ಇಲ್ಲಿ ಕೆಲಸ ಮಾಡಿರುವುದನ್ನು ಗಮನಿಸಬಹುದು. ಈ ರೀತಿ ಕ್ಷೇತ್ರದ ಉಗಮವನ್ನು ತಿಳಿಯಬಹುದಾಗಿದೆ. ಅನಂತರದಲ್ಲಿ ಅಲ್ಲಿಯ ಜನರಿಗೆ ದೇವರ ವಾಸಸ್ಥಳವು ತಿಳಿದು ಅಂದಿನಿಂದ ಇಂದಿನವರೆಗೂ ಪೂಜೆ ಪುರಸ್ಕಾರಗಳನ್ನು ಸಂಪ್ರದಾಯಬದ್ಧವಾಗಿ ನೆರವೇರಿಸಿಕೊಂಡು ಬರಲಾಗಿದೆ. ದಲಿತರನ್ನು ಮೊದಲ್ಗೊಂಡು ಎಲ್ಲ ಮತ ಜಾತಿಯವರಿಗೂ ಯಾವುದೇ ನಿರ್ಬಂಧವಿಲ್ಲದೆ ದೇವರ ದರ್ಶನ ಮತ್ತು ಉತ್ಸವವನ್ನು ಮಾಡಲು ಪಲ್ಲಕ್ಕಿಯನ್ನು ನೀಡುವುದು ಈ ಕ್ಷೇತ್ರದ ವಿಶಿಷ್ಟ ಅಂಶಗಳಲ್ಲಿ ಒಂದಾಗಿದೆ. ಹಾಗೆಯೇ ಈ ದೇವಾಲಯದಲ್ಲಿ ಪೂಜೆಯ ಕಾರ್ಯವನ್ನು ಮಾಡುವವರು ವೈಷ್ಣವರು ಇವರಿಗೆ ಸಂಬಂಧಿಸಿದಂತೆ ಒಂದು ಸ್ವಾರಸ್ಯ ಪೂರ್ಣವಾದ ಕಥೆಯಿರುವುದನ್ನು ಹೇಳುತ್ತಾರೆ.

ರಂಗನಾಥನಿಗೆ ಒಂದು ದೇವಾಲಯವಂತೂ ಆಯಿತು, ಆದರೆ ನಾಮಧಾರಿಯಾದ ರಂಗನಾಥನಿಗೆ ಪ್ರತಿದಿನ ಪೂಜೆ ಪುನಸ್ಕಾರಗಳನ್ನು ಮಾಡಬೇಕು ಅದು ಹೇಗೆ? ಯಾರಿಂದ ಮಾಡಿಸಬೇಕು? ಎಂಬ ಪ್ರಶ್ನೆಗೆ ಉತ್ತರ ಸಿಗುವುದೇ ಕಷ್ಟವಾಯಿತು. ಕೊನೆಗೆ ಊರಿನವರೆಲ್ಲಾ ಸೇರಿ ಒಬ್ಬ ಬ್ರಾಹ್ಮಣನ್ನು ಕರೆತಂದರು. ಅವನು ಹುಲಿಯನ್ನು ನೋಡಿ ಬೆಟ್ಟಕ್ಕೆ ನಾನು ಹೋಗುವುದಿಲ್ಲವೆಂದು ಹೇಳಿ ಹೊರಟು ಹೋದನಂತೆ. ಮತ್ತೆ ಗ್ರಾಮಸ್ಥರಿಗೆ ಚಿಂತೆ ಶುರುವಾಯಿತು.ಅನಂತರದಲ್ಲಿ ರಂಗನಾಥನ ಬಳಿ ಹೋಗಿ ತಮ್ಮ ಸಂಕಟವನ್ನು ಹೇಳಿಕೊಂಡಾಗ ಅಂದು ರಾತ್ರಿ ಬಿ.ಬೆಟ್ಟಹಳ್ಳಿಯ ಮುಖ್ಯಸ್ಥನಾದ ಸಬ್ಬೇಗೌಡನಿಗೆ ಕನಸ್ಸಿನಲ್ಲಿ ರಂಗನಾಥನು ದಾಸಯ್ಯನ ವೇಷಧಾರಿಯಾಗಿ ಬಂದು ಪರಿಹಾರ ಸೂಚಿಸಿದನಂತೆ. "ನೀವೆಲ್ಲರೂ ನನ್ನ ಪೂಜೆಯ ಬಗ್ಗೆ

ಇಷ್ಟು ಮುತುವರ್ಜಿ ವಹಿಸುತ್ತಿರುವುದನ್ನು ತಿಳಿದು ತುಂಬಾ ಸಂತೋಷಗೊಂಡೆ, ನೀವೇನೂ ಚಿಂತಿಸಬೇಕಿಲ್ಲ. ನಾಳೆ ಬೆಳಿಗ್ಗೆ ಒಬ್ಬ ವಿಧವೆ ಮುದುಕಿಯು ಇಬ್ಬರು ಗಂಡು ಮಕ್ಕಳನ್ನು ಕರೆದುಕೊಂಡು ಬರುವಳು. ಆಕೆ ಜಾತಿಯಲ್ಲಿ ಶ್ರೀವೈಷ್ಣವರು ಅವರು ಮಾಡುವ ಪೂಜೆ ಮತ್ತು ಅವರು ಮಾಡಿ ತಂದ ನೈವೇದ್ಯವನ್ನು ಸ್ವೀಕರಿಸಿ ಸಂತುಷ್ಟನಾಗಿರುತ್ತೇನೆ. ನೀವು ಮಾತ್ರ ಆಕೆಗೆ ಬೇಕಾದ ಅನುಕೂಲವನ್ನು ಮಾಡಿಕೊಟ್ಟರೆ ಸಾಕು. ಇನ್ನೂ ಇಂತಹ ಸಮಸ್ಯೆಗಳೇನಾದರೂ ಬಂದರೆ ನನ್ನಲ್ಲಿ ಬಂದು ಹೇಳಿಕೊಂಡರೆ ನಾನು ಪರಿಹರಿಸುತ್ತೇನೆ" ಎಂದು ಸೂಚಿಸಿದನು.

ಇತ್ತ ದಕ್ಷಿಣ ಭಾರತದಲ್ಲಿ ತುಂಬಾ ಬರಗಾಲ ಬಂದಿತ್ತು. ವೆಲ್ಲಿಪುತ್ತೂರು ಎಂಬ ಗ್ರಾಮದಲ್ಲಿ ಹೊಟ್ಟೆಗಿಲ್ಲದೆ ಎಷ್ಟೊ ಮಂದಿ ತುತ್ತಾದರು. ಉಳಿದವರು ಊರನ್ನು ಬಿಟ್ಟು ಬೇರೆ ಬೇರೆ ಊರುಗಳನ್ನು ಸೇರಿಕೊಂಡರು. ಇದೇ ವೆಲ್ಲಿಪುತ್ತೂರಿನಿಂದ ಲಕ್ಷ್ಮಮ್ಮ ಎಂಬ ವಿಧವೆಯು ಎರಡು ಗಂಡು ಮಕ್ಕಳನ್ನು ಕರೆದುಕೊಂಡು ಒಡ್ಡಗಲ್ಲು ಗಿರಿಯ ಪಕ್ಕದ ಕಲ್ಕುಣಿ ಎಂಬ ಗ್ರಾಮಕ್ಕೆ ಬಂದು ನೆಲೆಸಿ ಜೀವನ ಸಾಗಿಸುತ್ತಿದ್ದರು. ಅಲ್ಲೂ ಸಹ ಅವರಿಗೆ ಸರಿಯಾದ ನೆಲೆ ಸಿಗದೇ ಅಲ್ಲಿಂದ ಮಕ್ಕಳನ್ನು ಕರೆದುಕೊಂಡು ಹೊರಟಳು. ದಾರಿಯಲ್ಲಿ ಒಂದು ಕೆರೆಯು ಕಾಣಿಸಿತು. ಚಿಕ್ಕ ಮಗ ನೀರು ಕುಡಿಯಲು ತಾಯಿಯನ್ನು ಕೇಳಿ ಕೆರೆಯಲ್ಲಿ ಇಳಿದು ನೀರನ್ನು ಕುಡಿಯುತ್ತಿದ್ದ. ಅದೇ ಕೆರೆಯ ಕೊನೆಯಲ್ಲಿ ಕುಳಿತಿದ್ದ ದಾಸಯ್ಯನು ಇವರಲ್ಲಿಗೆ ಬಂದು ನಿಂತಿದ್ದ ಮುದುಕಿಯನ್ನು ಕುರಿತು ಏನಮ್ಮ ಮುದುಕಿ ನೀವು ಎಲ್ಲಿಂದ ಬರುತ್ತಿರುವಿರಿ? ನಿಮ್ಮನ್ನು ನೋಡಿದರೆ ತುಂಬಾ ಕಷ್ಟದಲ್ಲಿರುವಂತೆ ಕಾಣುತ್ತೀರಿ ನೀವು ಯಾವ ಮತದವರು? ಹೀಗೆಲ್ಲಾ ಒಂದೇ ಸಮನೆ ಪ್ರಶ್ನೆಗಳನ್ನು ಕೇಳಿದಾಗ ಮುದುಕಿಗೆ ಆಶ್ಚರ್ಯವೂ, ಗಾಬರಿಯೂ ಆಯಿತು. ಇರಲಿ ಈತನು ನನಗೂ ನನ್ನ ಮಕ್ಕಳಿಗೂ ಅನುಕೂಲವಾಗುವ ದಾರಿ ತೋರಬಹುದು ಎಂದು ಮನದಲ್ಲಿಯೇ ಅಂದುಕೊಂಡಳು.

'ನೋಡಪ್ಪ ನಾವು ಕಣಿವೆ ಕೊಪ್ಪಲಿನ ವೆಲ್ಲಿಪುತ್ತೂರಿನಿಂದ ಬಂದೆವು. ಅಲ್ಲಿ ಬರಗಾಲದ ಕಾರಣ ಊರೂರು ತಿರುಗಿ ನಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದೇವೆ. ನನ್ನ ಹೆಸರು ಲಕ್ಷ್ಮಮ್ಮ, ಈತ ನನ್ನ ದೊಡ್ಡಮಗ ವೆಂಕಟಾಚಲ, ಇವನು ನನ್ನ ಚಿಕ್ಕಮಗ ರಂಗನಾಥ ಅಂತ ನಾವು ಸತಾನಿ ಶ್ರೀವೈಷ್ಣವರು ಏಕಪ್ಪ ಏನು ವಿಷಯ ಎಂದಳು'. ಅದಕ್ಕೆ ದಾಸಯ್ಯ "ಹಾಗಾದರೆ ನಾನೊಂದು ವಿಷಯ ಹೇಳುತ್ತೇನೆ ಕೇಳುತ್ತಿಯಾ? ಇಲ್ಲಿ ಎದುರಿಗೆ ಕಾಣುವ ಬೆಟ್ಟದ ನೆತ್ತಿಯ ಮೇಲೆ ಒಡ್ಡಗಲ್ಲು ರಂಗನಾಥನ ದೇವಾಲಯವಿದೆ. ಅಲ್ಲಿ ದೇವರ ಪೂಜೆ ಮಾಡುವವರು ಯಾರೂ ಇಲ್ಲ. ಆದ್ದರಿಂದ ನೀನು ನಿನ್ನ ಮಕ್ಕಳಿಂದ ದೇವರಿಗೆ ಸಮಯಕ್ಕೆ ಸರಿಯಾಗಿ ನೈವೇದ್ಯ ಮತ್ತು ಪೂಜೆ ಮಾಡಿಸಿಕೊಂಡು ರಂಗನ ಸೇವೆ ಮಾಡಿಕೊಂಡಿದ್ದರೆ, ನಿಮ್ಮ ಜೀವನಕ್ಕೆ ಬೇಕಾಗುವ ಅನುಕೂಲವನ್ನು ನಾನು ಮಾಡಿಸಿಕೊಡುತ್ತೇನೆ. ನೀನೇನೂ ಚಿಂತಿಸಬೇಡ ಹೇಗೂ ನೀನು ಜಾತಿಯಲ್ಲಿ ವೈಷ್ಣವರೆಂದು ಹೇಳಿದೆ, ಆತನು ನಿನ್ನ ಮಕ್ಕಳು ಮಾಡುವ ಪೂಜೆಯಿಂದ ಸಂತುಷ್ಟನಾಗುತ್ತಾನೆ" ಎಂದು ದಾಸಯ್ಯನ ರೂಪದಲ್ಲಿರುವ ರಂಗನಾಥನು ಮುದುಕಿಗೆ ಹೇಳಿದನು. ಈ ಮಾತುಗಳನ್ನು ಕೇಳುತ್ತಿದ್ದ ಮುದುಕಿಗೆ ತುಂಬಾ ಆಶ್ಚರ್ಯವೂ ಮತ್ತು ಹೆದರಿಕೆಯೂ ಆಯಿತು. ದಾಸಯ್ಯನಿಗೆ ಏನು ಹೇಳಬೇಕೆಂದು ತೋರದೆ ನಿಂತಲ್ಲಿಯೇ ಹಾಗೆಯೇ ನಿಂತಿದ್ದಳು. ಏನು ಮುದುಕಿ ಏನನ್ನು ಯೋಚಿಸಿದೆ ಎಂದು ದಾಸಯ್ಯ ಮಾತು ಮುಂದುವರೆಸಿದ. ಮುದುಕಿ ನೋಡಪ್ಪ ದಾಸಯ್ಯ ಇದು ನನ್ನ ಕೈಲಾಗದ ಕೆಲಸ, ಈ ಕಾಡಿನಲ್ಲಿ

ಅದೂ ಬೆಟ್ಟ ಹತ್ತಿ ದೇವರಿಗೆ ಪೂಜೆ ಸಲ್ಲಿಸಿ ಬರುವುದು ಹುಡುಗಾಟದ ಕೆಲಸವೇನು? ಅದೂ ಈ ಮಕ್ಕಳು ಏನೂ ಅರಿಯದವರು ಅವರಿಂದ ಖಂಡಿತ ಆಗುವುದಿಲ್ಲ ಬೇಡಪ್ಪ ಬೇಡ ನಮ್ಮ ಜೀವನ ಹೇಗೋ ಸಾಗುತ್ತದೆ. ನಾವಿನ್ನು ಬರುತ್ತೇವೆ ಎಂದು ಹೊರಟು ಹೋದಳು. ಅಷ್ಟರಲ್ಲಿ ಕೋಪಿಸಿಕೊಂಡು ಹೋಗದಂತೆ ಹೇಳಿದ. ಜಬರದಸ್ತು ಮಾಡಿದರೆ ಆಗುವುದಿಲ್ಲ ಎಂದರೂ ಚಿಕ್ಕಮಗನನ್ನು ಎತ್ತಿ ಕೆರೆಗೆ ಎಸೆದ. ಮುದುಕಿ ಚಿರಾಡಿದಳು. ನಾನು ಹೇಳಿದಂತೆ ಕೇಳುವುದಾದರೆ ಮಗನನ್ನು ಬದುಕಿಸುವುದಾಗಿ ತಿಳಿಸಿದ.ಮುದುಕಿ ಒಪ್ಪಿದಳು. ಹಾಗಾದರೆ ಸರಿ ಎಂದು ಹೇಳುತ್ತಾ ನೀರಿನಲ್ಲಿ ಹುಡುಗನನ್ನು ಮೇಲೆತ್ತಿದನು. ಆಗ ಮುದುಕಿಯು ಸಮಾಧಾನಗೊಂಡು ದಾಸಪ್ಪ ನಾನೇನೋ ನನ್ನ ಮಕ್ಕಳನ್ನು ದೇವರಿಗೆ ಪೂಜೆ ಮಾಡಲು ಕಳಿಸುತ್ತೇನೆ. ಆದರೆ ನನ್ನ ಮಕ್ಕಳು ಏನೂ ಅರಿಯದವರು ಒಂದು ವೇಳೆ ತಪ್ಪನ್ನೇನಾದರೂ ಮಾಡಿದರೆ ಅವರನ್ನು ಕ್ಷಮಿಸಿ ಕಾಪಾಡಬೇಕು ಮತ್ತು ನಮಗೆ ಯಾವ ತೊಂದರೆಯು ಆಗದಂತೆ ನೋಡಿಕೊಳ್ಳವುದು ನಿನಗೆ ಸೇರಿದ್ದು, ಇಷ್ಟಕ್ಕೂ ಒಪ್ಪಿಕೊಂಡರೆ ಮಾತ್ರ ನಾನು ಸಿದ್ಧಳಿದ್ದೇನೆ ಎಂದು ಮುದುಕಿ ಹೇಳಿದಳು. ಅದಕ್ಕೆ ರಂಗನಾಥನು ಆಗಬಹುದು ನಿನ್ನ ಮಕ್ಕಳನ್ನು ಎಡಗೈಯಲ್ಲಿ ಒಂದು ತುಳಸಿ ದಳವನ್ನು ಹಾಕಿದರೂ ಆತ ಸಂತೃಪ್ತನಾಗುತ್ತಾನೆ ಎಂದನು. ಈ ರೀತಿ ಇಬ್ಬರ ನಡುವೆ ಮಾತುಕತೆಯಾಯಿತು.

ಅನಂತರ ಶ್ರೀರಂಗನು ಪೂರ್ವದಿಕ್ಕಿನಲ್ಲಿರುವ ಬೆಟ್ಟಹಳ್ಳಿ ಗ್ರಾಮಕ್ಕೆ ಹೋಗಲು ತಿಳಿಸಿದ. ಅಲ್ಲಿ ಸಬ್ಬೇಗೌಡ ಕಾಯುತ್ತಿರುವನು ಅವನು ನಿನಗೆ ಎಲ್ಲ ರೀತಿಯ ಸೌಕರ್ಯಗಳನ್ನು ಮಾಡಿಕೊಡುವುದಾಗಿ ತಿಳಿಸಿ ಬೀಳ್ಕೊಟ್ಟ.ಅಂದಿನಿಂದ ಬೆಟ್ಟಹಳ್ಳಿ ಗ್ರಾಮದಲ್ಲಿ ವೈಷ್ಣವರು ಬಂದು ನೆಲೆಸಿದರು. ಅಂದಿನಿಂದ ಇಂದಿನವರೆಗೂ ಅದೇ ರೀತಿಯಾದ ಆಚಾರ ವಿಚಾರಗಳನ್ನು ನಡೆಸಿಕೊಂಡು ಶುದ್ಧ ಭಕ್ತಿಯಿಂದ ದೇವರ ಸೇವೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಅಂದು ಬಂದು ನೆಲೆಸಿದ ಒಂದು ಕುಟುಂಬ ಇಂದು ನಲವತ್ತು ಕುಟುಂಬಗಳಾಗಿ ಎಲ್ಲಾ ಕುಟುಂಬದವರು ದೇವರ ಸೇವೆಯನ್ನು ಹಂಚಿಕೊಂಡು ನಡೆಸುತ್ತಿದ್ದಾರೆ.

ಹಿಂದೆ ಒಡ್ಡಗಲ್ಲು ರಂಗನಾಥನ ಬೆಟ್ಟಕ್ಕೆ ಹೋಗುವಾಗ ಹುಲಿ ಕಾಟವಿತ್ತಂತೆ ಆಗ ಗ್ರಾಮಸ್ಥರು ತಮ್ಮ ದುಃಖವನ್ನು ರಂಗನಾಥನಿಗೆ ಹೇಳಿಕೊಂಡಾಗ ಹುಲಿಯನ್ನು ಬೇಟೆಯಾಡಿ ಬೆಟ್ಟಕ್ಕೆ ಹೋಗುವ ಮಾರ್ಗದ ಮಧ್ಯದಲ್ಲಿ ಹಾಕಿದನಂತೆ. ಅಂದಿನಿಂದ ಗ್ರಾಮಸ್ಥರು ಅಲ್ಲಿ ಒಂದು ಗುಡಿ ರೂಪದ ದೇವಾಲಯವನ್ನು ನಿರ್ಮಿಸಿ ರಂಗನಾಥನಿಗೆ ಬೇಟೆರಾಯನೆಂದು ಪ್ರತಿ ನಾಮಕರಣವನ್ನು ಮಾಡಿ ಪೂಜಿಸಲು ಆರಂಭಿಸಿದರು. ಈಗಲೂ ಸಹ ಮೆಟ್ಟಿಲುಗಳನ್ನು ಹತ್ತುವಾಗ ಮಧ್ಯದಲ್ಲಿ ದೇವಾಲಯವನ್ನು ನಾವು ನೋಡಬಹುದಾಗಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಅಂಬಳಿಕೆ ಹಿರಿಯಣ್ಣ. (2009). ಮಲೆನಾಡಿನ ವೈಷ್ಣವ ಒಕ್ಕಲಿಗರು. ಪು–196
    - ಶಿವಕುಮಾರ ಸ್ವಾಮಿ. ಸಿ. ಎಸ್. & ಎಚ್. ಬಿ. ನಾಗೇಶ್ (ಸಂ.). (2003). ಕರ್ನಾಟಕ ಜಾತ್ರೆಗಳು. ಬೆಂಗಳೂರು. ಪು–62, 70–71.
    - ದೇ.ಜವರೇಗೌಡ. (1973). ಜಾನಪದ ಅಧ್ಯಯನ, ಮೈಸೂರು. ಪು–337–338.
    - ನಾಗೇಗೌಡ. ಎಚ್.ಎಲ್. (ಸಂ.). (2003). ಜಾನಪದ ಜಗತ್ತು ಮೈಸೂರು. ಪು–11.